

ಅನುಕರಿಸಿದ ಭಾರತದ ಪಡ್ಡೆಗಳ ಸಂಖ್ಯೆಯೂ ದೊಡ್ಡದಿದೆ.

'ಅಪ್‌ಸ್ಟೈಲ್ ವಿತ್ ಶಾರ್ಟ್ ಸೈಡ್ಸ್' – ಇದು ಬೋನ್‌ಮನ್ ಕೇಶ ವಿನ್ಯಾಸ ಮಾಡಿಸಿ ಎರಡು ವಾರದ ನಂತರ ಕೂದಲು ಬೆಳೆದರೆ ಹೇಗೆ ಆಗುವುದೋ ಅಂಥ ಶೈಲಿ. 'ಬದ್ರೀನಾಥ್ ಕಿ ದುಲ್ಹನಿಯಾ' ಹಿಂದಿ ಚಿತ್ರದಲ್ಲಿ ವರುಣ್ ಧವನ್, 'ಕಾಬಿಲ್' ಸಿನಿಮಾದಲ್ಲಿ ಹೃತಿಕ್ ರೋಷನ್, 'ರಂಗೂನ್'ನಲ್ಲಿ ಶಾಹಿದ್ ಕಪೂರ್ ಹಾಗೂ ಸೈಫ್ ಅಲಿ ಖಾನ್ ಇದೇ ಕೇಶವಿನ್ಯಾಸದಲ್ಲಿ ಕಾಣಿಸಿಕೊಂಡಿದ್ದು. ಹೋದವರ್ಷ ಅತಿ ಹೆಚ್ಚು ಜನಪ್ರಿಯವಾದ ಈ ಕೇಶ ವಿನ್ಯಾಸ ಈಗಲೂ ಅನೇಕ ಯುವಕರ ಮೊದಲ ಆಯ್ಕೆ.

'ಟಸ್ಲ್ಡ್ ಹೇರ್ ಸ್ಟೈಲ್' ಎಂಬ ಇನ್ನೊಂದು ಸಮಕಾಲೀನ ಬಗೆ ಇದೆ. 'ಹಿಗ್ಗಾಮುಗ್ಗಾ ಎಳೆದಂತಹ' ಎಂಬ ಅರ್ಥ ಕೊಡುವ ಪದ 'ಟಸ್ಲ್ಡ್'. ಆದರೆ, ಕೇಶ ವಿನ್ಯಾಸ ಗಮನಿಸಿದರೆ ಈ ಅರ್ಥವನ್ನೇ ಅಕ್ಷರಶಃ ಅನ್ವಯಿಸಲಾಗದು ಎನ್ನುವುದು ವೇದ್ಯವಾಗುತ್ತದೆ. 'ದಂಗಲ್' ಸಿನಿಮಾದಲ್ಲಿ ಅಮೀರ್ ಖಾನ್ ಇಂಥ ಶೈಲಿಯ ತಲೆಗೂದಲನ್ನು ಹೊಂದಿದ್ದನ್ನು ನೆನಪಿಸಿಕೊಳ್ಳಿ. ಅತ್ಯಾಧುನಿಕವೂ ಅಲ್ಲದ, ಅತಿ ಸಾಂಪ್ರದಾಯಿಕ ಎನ್ನಲೂ ಆಗದಂಥ ಒತ್ತೊತ್ತಾದ ಕೂದಲು ಹೊಂದುವ ಪರಿ ಅದು. ಹರಿಯಾಣದಲ್ಲಿ ಇಂಥ ಕೇಶವಿನ್ಯಾಸದ ಹಳ್ಳಿಗರ ಸಂಖ್ಯೆ ದೊಡ್ಡದಿದೆಯಂತೆ. ಅಮೀರ್ ಖಾನ್ 'ದಂಗಲ್' ಸಿನಿಮಾ ಕೇಶ ವಿನ್ಯಾಸ ಅನುಕರಣೆ ಮಾಡಿದವರು ಕಡಿಮೆಯೇ ಆದರೂ ಮಧ್ಯಮ ವಯಸ್ಕರಿಗೆ ಅದು ಆಕರ್ಷಕವಾಗಿ ಕಂಡಿದ್ದು ಸುಳ್ಳಲ್ಲ.

ನರೆಗೂದಲು ಈ ಕಾಲದವರಲ್ಲಿ ವ್ಯಾಪಕವಾಗಿರುವ ಸಮಸ್ಯೆ. ಪರಿಸರ ಮಾಲಿನ್ಯ, ಜೀವನಶೈಲಿ, ಆಹಾರ ಕ್ರಮದಿಂದ ತಾರುಣ್ಯದ ಹೊತ್ತಿಗಾಗಲೇ ಬಿಳಿಕೂದಲು ಮಾತನಾಡ ತೊಡಗುತ್ತದೆ. ಅದರ ದನಿ ಉಡುಗಿಸಲು ಕಂಡ ಕಂಡ ನಾಟಿ ವೈದ್ಯವನ್ನೆಲ್ಲ ಮಾಡುವ ಹೈಕಳಿದ್ದಾರೆ. ಅದ್ಯಾವುದೂ ಫಲಿಸದೇ ಹೋದಾಗ ಚಿಂತಾಕ್ರಾಂತರಾಗಬೇಕಿಲ್ಲ. ಈಗ ಹೆಚ್ಚು ಬಿಳಿ, ಕಡಿಮೆ ಕಪ್ಪು ಕೂದಲು ಕೂಡ 'ಸ್ಟೈಲಿಷ್'. ಉಪ್ಪು ಮೆಣಸಿನ ಶೈಲಿ ಎಂದೇ ಇದು ಜನಪ್ರಿಯ. 'ಸಾಲ್ಟ್ ಅಂಡ್ ಪೆಪರ್ ಮಾಡಿ' ಎಂದು ಸಲೂನ್ ಗಳಲ್ಲಿ ಬಣ್ಣ ಹಚ್ಚಿಸಿಕೊಳ್ಳುವ ಹರೆಯದವರನ್ನು ನೋಡಿ ಮಧ್ಯಮವಯಸ್ಕರೂ ಸಮಾಧಾನ ಪಟ್ಟುಕೊಳ್ಳಬಹುದು. ನರೆಗೂದಲಿನ ಸಮಸ್ಯೆ ಮೀರಲು ಸಿಕ್ಕ ಪರಿಹಾರ ಈ ಫ್ಯಾಷನ್ ಸ್ಟೇಟ್ಮೆಂಟ್. ತಮಿಳು ನಟ ಅಜಿತ್ ಇಂಥ 'ಸಾಲ್ಟ್ ಅಂಡ್ ಪೆಪ್ಪರ್'ನ ಅಘೋಷಿತ ರಾಯಭಾರಿ. 'ಮಫ್ತಿ' ಕನ್ನಡ ಸಿನಿಮಾದಲ್ಲಿ ಶಿವರಾಜ್ ಕುಮಾರ್ ಕೂಡ ಈ ಶೈಲಿಯಲ್ಲಿ ಕಾಣಿಸಿಕೊಂಡರು. ಹಿಂದಿ ನಟ ಅಕ್ಷಯ್ ಕುಮಾರ್ ಸಹ ಇದನ್ನು ಪ್ರಯೋಗಿಸಿದವರೇ. ಮಲಯಾಳದ ಜನಪ್ರಿಯ ಸಿನಿಮಾ 'ಸಾಲ್ಟ್ ಅಂಡ್ ಪೆಪ್ಪರ್' ಅನ್ನೇ ಅಲ್ಲವೇ ಕನ್ನಡದಲ್ಲಿ ಪ್ರಕಾಶ್ ರೈ 'ಒಗ್ಗರಣೆ' ಆಗಿಸಿದ್ದು. ಪ್ರೇಮೋತ್ಸಾಹಕ್ಕೂ ವಯಸ್ಸಿಗೂ ಸಂಬಂಧವಿಲ್ಲ ಎನ್ನುವುದರ ರೂಪಕವಾಗಿ 'ಸಾಲ್ಟ್ ಅಂಡ್ ಪೆಪ್ಪರ್' ಸದ್ದು ಮಾಡುತ್ತಿದೆ.

ಸ್ಪಿನ್ನರ್ ಮುರಳಿ ಕಾರ್ತಿಕ್ ತನಗೆ ಎಲ್ಲ ಕೂದಲನ್ನೂ ಬೆಳ್ಳಗೆ ಮಾಡಿಕೊಳ್ಳಬೇಕೆಂಬ ಹುಕಿ ಇದೆ ಎಂದು ಒಂದೂವರೆ ದಶಕದ ಹಿಂದೆ ಹೇಳಿಕೊಂಡಿದ್ದರು. ಈಗ ಅವರ ಮಂಡೆ ಗೋಳಾಕಾರವಾಗಿದೆ. ಶೇವ್ ಮಾಡಿದ ತಲೆ ಕೂಡ ಫ್ಯಾಷನ್ ಸ್ಟೇಟ್ಮೆಂಟ್. ಕಥೆಗಾರ ವಸುಧೇಂದ್ರ ಇದನ್ನೇ ಯತ್ನಿಸಿ, 'ತುಂಬಾ ಜನ ಚೆನ್ನಾಗಿದೆ ಅಂತ ಹೇಳುತ್ತಿದ್ದಾರೆ' ಎಂದು ಮುಖದ ತುಂಬ ನಕ್ಕಿದ್ದರು; ಈಗಲೂ ಇದೇ ವಿನ್ಯಾಸದಲ್ಲಿ ಅವರು ನಗುನಗುತ್ತಾ ಇದ್ದಾರೆ. ಇದನ್ನು ಮೊಗ್ಯಾಂಬೊ ಹೇರ್ ಸ್ಟೈಲ್ ಎಂದು ಬೇಕಾದರೂ ಕರೆಯಬಹುದು.

'ಕೆಜಿಎಫ್' ಕನ್ನಡ ಸಿನಿಮಾದಲ್ಲಿ ನಟ ಯಶ್ ಕೂದಲಿನ ನಡುವೆ ಮುಖ ಕಾಣುವ ಗೆಟಪ್ ಹಾಕಿಕೊಂಡಿದ್ದಾರೆ. ಗಡ್ಡ, ತಲೆಗೂದಲು ಎರಡೂ ದಟ್ಟ. ಬಹುಶಃ ಮುಂದೆ ಅದು ಕನ್ನಡಿಗರ ಫ್ಯಾಷನ್ ಸ್ಟೇಟ್ಮೆಂಟ್ ಆಗಬಹುದೇನೋ? ಕನ್ನಡಿಯಂತೂ ಇಂಥ ಹಲವು ವಿನ್ಯಾಸಗಳನ್ನು ಈಗೀಗ ಧಾಳಾಗಿ ಕಾಣಿಸತೊಡಗಿದೆ. ■


ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮಾಂತ್ರಿಕರು

ಶ್ರೀಯುತ ಪರಶುರಾಮ್ ಗುರೂಜಿ



ಶ್ರೀ ಸಾಯಿಬಾಬ ಉಪಾಸಕರು

ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಈಗಿನ ಕಾಲದಲ್ಲೂ ಜೀವಂತವಾಗಿರುವಂತಹ ಕೇರಳದ ಕೆಲವು ಪ್ರಾಚೀನ ವಿಸ್ಮಯ ವಿದ್ಯೆಗಳಿಂದ

ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ

ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:

ಜೈಬಾಲಾಜಿ ಜ್ಯೋತಿಷ್ಯಂ ಬನಶಂಕರಿ ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬೆಂಗಳೂರು. 9620444460